# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 10374/2012

| | |
|---|---|
| ಸಾಕ್ಷಿದಾರರ ಹೆಸರು : | ಸಿದ್ದಪ್ಪ |
| ತಂದೆಯ ಹೆಸರು : | ಸಾಬಣ್ಣ |
| ವಯಸ್ಸು : | 41 ವರ್ಷ |
| ಉದ್ಯೋಗ : | ಎ.ಎಸ್.ಐ ತಿಲಕ್ ನಗರ ಪಿ.ಎಸ್. |
| ವಾಸ : | ಮೈಸೂರು ರೋಡ ವಸತಿ ಗೃಹ, ಬೆಂಗಳೂರು. |

**ದಿನಾಂಕ 23/01/2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ನಾನು ಮಾರ್ಚ-2021 ರಿಂದ ಇಲ್ಲಿಯವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ 1 ಮತ್ತು 2 ನೇ ಆರೋಪಿತರ ವಿರುದ್ದ ಉದ್ಘೋಷಣೆ ಮಾಡುವಂತೆ ನ್ಯಾಯಾಲಯದಿಂದ ಆದೇಶ ಬಂದಿದ್ದು. ಠಾಣಾಧಿಕಾರಿಯವರು ಉದ್ಘೋಷಣೆ ಮಾಡುವಂತೆ ನನಗೆ ನಿಯೋಜಿಸಿರುತ್ತಾರೆ.

2. ಅದರಂತೆ ದಿನಾಂಕ 30/01/2023 ರಂದು 1ನೇ ಆರೋಪಿಯ ವಿಳಾಸವಾದ ತಮನುನ್ನೀಸಾ ರವರ ಮನೆ, ಮನೆ ನಂ.3/62, ಮದರಸಾ ಹತ್ತಿರ, ದೊಡ್ಡ ಮಸೀದಿ ಹಿಂಭಾಗ ಅವಲಹಳ್ಳಿ, ಅಂಜನಾಪುರ ಪೋಸ್ಟ, ಬೆಂಗಳೂರು ಇಲ್ಲಿಗೆ ಹೋಗಿ 1ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ಅಜ್ಗರ ಅಲಿ ಖಾನ್ ಮತ್ತು ಆರೀಫ್ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 1ನೇ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಘೋಷಿಸಿ ಸದರಿ 1ನೇ ಆರೋಪಿ ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ

ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಅವಲಹಳ್ಳಿ ಮಸೀದಿ ಗೋಡೆಗೆ, ಮದರಸಾ ಸ್ಕೂಲ್ ಗೋಡೆಗೆ ಮತ್ತು ಅವಲಹಳ್ಳಿ ಬಸ್ ನಿಲ್ದಾಣದ ಗೋಡೆಗೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವೆರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು**.

3. ಅದೇ ದಿನ 2ನೇ ಆರೋಪಿಯ ವಿಳಾಸವಾದ ವಾಟರ್ ಟ್ಯಾಂಕ್, ಮಸೀದಿ ಪಕ್ಕ, ವಿಜಿನಾಪುರ, ದೂರವಾಣಿ ನಗರ, ಬೆಂಗಳೂರು ಇಲ್ಲಿಗೆ ಹೋಗಿ 2ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ಅನ್ವರ್ ಖಾನ್ ಮತ್ತು ಇಮ್ರಾನ್ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 2ನೇ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಘೋಷಿಸಿ ಸದರಿ 2ನೇ ಆರೋಪಿ ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಜೋರಾಗಿ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಬಸ್ ನಿಲ್ದಾಣದ ಗೋಡೆಗೆ, ಮಸೀದಿಯ ಗೋಡೆಗೆ ಮತ್ತು ವಾಟರ್ ಟ್ಯಾಂಕ್ ಗೋಡೆಗೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಮದ್ಯಾಹ್ನ 02.00 ಗಂಟೆಯಿಂದ 03.00 ಗಂಟೆಯವೆರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ

ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)

ಮು.ಮ.ದಂ.ನ್ಯಾ.ಬೆಂ.ನಗರ.